## ಸಂಗ್ರಹಯೋಗ್ಯ ಧಾರಾವಾಹಿ

ನಟರಾಜ್ ಹುಳಿಯಾರ್ ಅವರು ಬರೆಯುತ್ತಿರುವ, ರಾಮಮನೋಹರ ಲೋಹಿಯಾ ಅವರ ಜೀವನಯಾನ ‘ಡಾಕ್ಟರ್ ಸಾಹೇಬ್’ ಆಸಕ್ತಿಕರವಾಗಿದೆ. ಲೋಹಿಯಾ ಅನುಭವಿಸಿದ ಜೈಲುಶಿಕ್ಷೆಯ ಚಿತ್ರಹಿಂಸೆ ಕುರಿತು ಓದುತ್ತಿರುವಾಗ ಮೈ ಜುಂ ಎಂದಿತು. ಇಷ್ಟೆಲ್ಲ ಕಷ್ಟಪಟ್ಟು ಪಡೆದ ಸ್ವಾತಂತ್ರ್ಯ ಎಷ್ಟು ಅಮೂಲ್ಯವಲ್ಲವೇ? ಸಂಗ್ರಹಯೋಗ್ಯ ಕಾದಂಬರಿ ಇದು.

—ಸಿ.ಆರ್. ಚಂಪಾ, ಚನ್ನಸಂದ್ರ

## ನೈಜ ಆಟವಾಗಿ ಉಳಿದಿಲ್ಲ!

‘ಅಪರಂಜಿಗೆ ಮತ್ತೆ ಮತ್ತೆ ಅಗ್ನಿಪರೀಕ್ಷೆ’ (ಮೇ 30, ವಿಶಾಖ ಎನ್.) ಕ್ರೀಡಾಲೇಖನ ಚೆನ್ನಾಗಿದೆ. ನಮ್ಮ ದೇಶದಲ್ಲಿ ಕ್ರೀಡಾಪಟುಗಳು ಗೆದ್ದು ಬಂದಾಗಿನ ಆದರ, ಸೋತಾಗ ವಿರುದ್ಧವಾಗಿರುತ್ತದೆ. 70ರ ದಶಕದಲ್ಲಿ ಅಜಿತ್ ವಾಡೇಕರ್ ತಂಡ ವೆಸ್ಟ್ ಇಂಡೀಸ್‌ನಲ್ಲಿ ಟೆಸ್ಟ್ ಸರಣಿ ಜಯ ಗಳಿಸಿ ಬಂದಾಗ ರತ್ನಗಂಬಳಿ ಗೌರವ ದೊರೆತಿತ್ತು. ಕೆಲವೇ ತಿಂಗಳಿನಲ್ಲಿ ಇಂಗ್ಲೆಂಡ್‌ನಲ್ಲಿ ಸರಣಿ ಸೋತು ಬಂದಾಗ ಕೊಳೆತ ಮೊಟ್ಟೆ, ಟೊಮ್ಯಾಟೊ ಎಸೆತದ ಸ್ವಾಗತ!. ಈಗಂತೂ ಕ್ರಿಕೆಟ್, ಹಣ ಹೂಡಿದವರಿಗೆ ಚಿನ್ನದ ಮೊಟ್ಟೆ ಇಡುವ ಕೋಳಿಯಾಗಿದೆಯೇ ಹೊರತು ನೈಜ ಆಟವಾಗಿ ಉಳಿದಿಲ್ಲ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು






## ಪರೀಕ್ಷಾ ಯಶಸ್ಸಿಗೆ ಕೈಪಿಡಿ

‘ಅಂಕಗಣಿತದ ಸೆಲೆಬ್ರಿಟಿಗಳು’ (ಮೇ 30, ರಾಘವೇಂದ್ರ ಕೆ. ತೊಗರ್ಸಿ) ಮುಖಪುಟ ಲೇಖನ ಶೈಕ್ಷಣಿಕವಾಗಿ ಅಧ್ಯಯನಶೀಲವಾಗಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳ ಅನುಭವವನ್ನು ಅವರ ಮಾತುಗಳಲ್ಲೇ ಕಟ್ಟಿಕೊಟ್ಟಿರುವುದರಿಂದ ಪೂರ್ವಸಿದ್ಧತೆಯ ಮಹತ್ವವೂ ತಿಳಿಯುತ್ತದೆ.

ಯಶಸ್ಸನ್ನು ಪಡೆಯಲು ಕೈಗೊಳ್ಳಬೇಕಾದ ಕ್ರಿಯಾಯೋಜನೆಗಳನ್ನು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಕಲಿಕಾಂಶಗಳ ಆಧಾರದಲ್ಲಿ ಹೇಗೆ ರೂಪಿಸಿಕೊಳ್ಳಬೇಕೆಂಬುದಕ್ಕೂ ಲೇಖನ ಆಧಾರ ಒದಗಿಸುತ್ತದೆ. ಮುಂದಿನ ಶೈಕ್ಷಣಿಕ ವರ್ಷಕ್ಕೆ ವ್ಯವಸ್ಥಿತ ಅಭ್ಯಾಸಕ್ಕೆ ಮಾರ್ಗದರ್ಶಿ ಲೇಖನ ಇದಾಗಿದೆ.

—ಲಲಿತಾ ಕೆ. ಹೊಸಪ್ಯಾಟಿ

## ವಿದ್ಯಾರ್ಥಿಗಳಿಗೆ ‘ಮಾರ್ಗದರ್ಶಿ’

ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಟಾಪರ್‌ಗಳ ಅಭಿಪ್ರಾಯಗಳನ್ನು ಸಂಗ್ರಹಿಸಿರುವುದು ಸ್ವಾಗತಾರ್ಹ.

ಯಶಸ್ಸು ಪಡೆದ ವಿದ್ಯಾರ್ಥಿಗಳ ಪರೀಕ್ಷಾ ತಯಾರಿ ಕ್ರಮಗಳು, ಅವರಲ್ಲಿನ ಆತ್ಮವಿಶ್ವಾಸ ಹಾಗೂ ಕೆಲವು ಅನುಭವಗಳನ್ನು ದಾಖಲಿಸಿರುವುದು ಕಿರಿಯ ವಿದ್ಯಾರ್ಥಿಗಳಿಗೆ ದಾರಿದೀಪದಂತಿದೆ.

— ಸ್ವಾಮಿ ಎಂ.ಎಸ್., ಹುಬ್ಬಳ್ಳಿ

## ಉತ್ತಮ ವೈಜ್ಞಾನಿಕ ಮಾಹಿತಿ

‘ನೀರು; ಎಷ್ಟು ಪುರಾತನ?’ (ಮೇ 30, ಪ್ರೊ. ಕೆ.ಎಸ್. ನಟರಾಜ್) ಲೇಖನದಲ್ಲಿ ನೀರಿನ ಕುರಿತು ಸರಳವಾಗಿ, ವೈಜ್ಞಾನಿಕ ಮಾಹಿತಿಗಳನ್ನು ನೀಡಿದ್ದಾರೆ. ನಮಗೆ ದಿನನಿತ್ಯ ಅವಶ್ಯಕವಾಗಿರುವ ಶುದ್ಧ ನೀರು ಹೇಗೆ ತಯಾರಾಗಿ ಇನ್ನೂ ಸಿಗುತ್ತಲಿದೆ ಎಂಬುದು ಅಚ್ಚರಿ ಮೂಡಿಸುತ್ತದೆ. ಲೇಖಕರೇ ತಿಳಿಸಿರುವಂತೆ ಕೆಲವೊಂದು ಮಾಹಿತಿ ನಿಗೂಢ. ನೀರಿನ ನಿರ್ವಹಣೆಗೆ ಮಾನವನ ಕ್ರಮಗಳ ಕುರಿತು ಮಾಹಿತಿ ಕೂಡ ಅವಶ್ಯವಿದೆ.

—ಡಾ. ಶಿವಶಂಕರ ಮೂರ್ತಿ

## ಮಹತ್ವಪೂರ್ಣ ವಿಷಯ

ನೀರಿನ ಕುರಿತ ಮಹತ್ವಪೂರ್ಣ ಲೇಖನವಿದು. ನಮ್ಮ ದಿನನಿತ್ಯದಲ್ಲಿ ಅತಿ ಅವಶ್ಯಕವೂ ಅನಿವಾರ್ಯವೂ ಆದ ಜೀವಜಲದ ಬಗ್ಗೆ ಅಪರೂಪದ ಮಾಹಿತಿ ಕಟ್ಟಿಕೊಟ್ಟಿದ್ದಾರೆ.

—ಎಸ್.ವಿ. ನಾಯಕ ರಾಣಿ, ಧಾರವಾಡ

## ಭೂತಾನಿನ ಮತ್ತೊಂದು ಮುಖ

‘ಲಬೋಸಾದಲ್ಲಿ ಒಂದು ದಿನ’ (ಮೇ 30, ರಹಮತ್ ತರೀಕೆರೆ) ಪ್ರವಾಸ ಕಥನ, ನಾವು ನೋಡದ ಭೂತಾನಿನ ಇನ್ನೊಂದು ಮುಖವನ್ನು ಪರಿಚಯಿಸಿತು. ಪುನೇಕ, ಥಿಂಪು, ಪರೋ ನೋಡಿ, ಟೈಗರ್ ನೆಸ್ಟ್ ಹತ್ತಿ ಸಂತೋಷಿಸಿದ್ದ ನಮಗೆ ಭೂತಾನಿನ ಬಗ್ಗೆ ಇಷ್ಟೊಂದು ಮಾಹಿತಿ ಲಭ್ಯವಾಗಿದ್ದು ಸಂತಸ ತಂದಿತು.

—ವಸುಧಾ ಜೈಶಂಕರ್, ಬೆಂಗಳೂರು



## ಸುಂದರ ಛಾಯಾಗ್ರಹಣ

‘ಹೊಂಚುಗಾರ ದರೋಡೆ ನೊಣ’ (ಮೇ 30, ಶಶಿಧರಸ್ವಾಮಿ ಆರ್. ಹಿರೇಮಠ) ‘ಕೀಟಪ್ರಪಂಚ’ ಲೇಖನ ಓದಿದೆ. ಓದಿದೆ ಅನ್ನುವುದಕ್ಕಿಂತ ನೊಣದ ಛಾಯಾಚಿತ್ರವನ್ನು ಬಹಳ ಹೊತ್ತು ನೋಡಿದೆ. ಇದೊಂದು ಉತ್ತಮ ಛಾಯಾಚಿತ್ರವನ್ನೊಳಗೊಂಡ ಚಿಕ್ಕ, ಚೊಕ್ಕ ಲೇಖನ. ಅದರಲ್ಲೂ ಸಂಯುಕ್ತಾಕ್ಷಿಗಳ ಛಾಯಾಗ್ರಹಣ ಅದ್ಭುತ!

—ಕೊಹಿಮ ಬಸರಕೋಡು

## ಕುಂಡೆ ಹಬ್ಬದ ಹಿಂದಿನ ಕಥೆ...

‘ಕುಂಡೆ ಹಬ್ಬ; ಸುಪ್ತ ಮನಸ್ಸಿಗೊಂದು ಕನ್ನಡಿ’ (ಮೇ 30, ಅಕ್ಷಯ ಕಾಂತಬೈಲು) ಉತ್ತಮ ಲೇಖನ. ಆದರೆ ಗಿರಿಜನರೊಂದಿಗೆ ಬೇಟೆಗೆ ಹೊರಡುವುದು ಅಯ್ಯಪ್ಪ, ಭದ್ರಕಾಳಿಯಲ್ಲ.

ಅಯ್ಯಪ್ಪ ಅಲ್ಲಿನ ಮೂಲನಿವಾಸಿ. ಅವನ ವರ್ಚಸ್ಸಿನಿಂದ ನಾಯಕತ್ವದ ಪಟ್ಟ. ಒಮ್ಮೆ ಸಂಗಡಿಗರೊಂದಿಗೆ ಆತ ಬೇಟೆಗೆ ಹೋದಾಗ ಎಷ್ಟೇ ಪ್ರಯತ್ನಿಸಿದರೂ ಬೇಟೆ ಸಿಗುವುದಿಲ್ಲ, ತಂದ ತಿನಿಸು, ನೀರು ಖಾಲಿಯಾಗಿ ಎಲ್ಲರೂ ವಿಶ್ರಾಂತಿಗೆ ತಯಾರಾಗುತ್ತಾರೆ. ನಂತರ ಅಯ್ಯಪ್ಪ ಕಾಡಿನೊಳಗೆ ಹೋಗುತ್ತಾನೆ. ಗಂಟೆ ಕಳೆದರೂ ಅಯ್ಯಪ್ಪನ ಪತ್ತೆ ಇಲ್ಲ! ತಾಳ್ಮೆಗೆಟ್ಟ ಸಂಗಡಿಗರು ಅಯ್ಯಪ್ಪನನ್ನು ಹುಡುಕಲು ಪ್ರಾರಂಭಿಸುತ್ತಾರೆ! ಹುಡುಕಿ ಹುಡುಕಿ ಕಡೆಗೆ ಒಂದು ಪ್ರಶಾಂತ, ಹೂಗಳಿಂದ ಸಿಂಗರಗೊಂಡ ಸ್ಥಳದಲ್ಲಿ ಸುಂದರ ಯುವತಿಯೊಂದಿಗೆ ಅಯ್ಯಪ್ಪ ಸಲ್ಲಾಪದಲ್ಲಿರುತ್ತಾನೆ! ಅವಳೇ ಭದ್ರಕಾಳಿ! ಇದನ್ನು ನೋಡಿದ ಬೇಟೆಗಾರರ ಸಿಟ್ಟು ನೆತ್ತಿಗೇರಿ ಬಾಯಿಗೆ ಬಂದಂತೆ ಬಯ್ಯುತ್ತಾರೆ! ನಂತರ ಕ್ಷಮೆ ಯಾಚಿಸುತ್ತಾರೆ! ಹಬ್ಬದ ದಿನ ವೇಷ ಹಾಕಿ ಬೈದಾಡಿದರೂ ಕಡೆಗೆ ಭದ್ರಕಾಳಿ ದೇವಸ್ಥಾನಕ್ಕೆ ಹೋಗಿ ಕ್ಷಮೆ ಕೇಳುವ ಸಂಪ್ರದಾಯ ಇದೆ.

—ರಾಮಕೃಷ್ಣ ಪಿ.ಬಿ., ಮಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in